# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 128/2019

**ಫಿರ್ಯಾದುದಾರರುಃ** **ಕರ್ನಾಟಕ ರಾಜ್ಯದ ಪರವಾಗಿ (ಚಿಂತಾಮಣಿ ನಗರ ಪೋಲಿಸರು)**

**ವಿರುದ್ಧ**

**ಆರೋಪಿತರುಃ** **ಲೋಕೇಶ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಮುನಿರಾಜ.ಬಿ. | ಫ್ರಾಸಾಃ | 3 |
| **ತಂದೆಯ ಹೆಸರುಃ** | ಚಿಕ್ಕ ಬಡಪ್ಪ | ಚಾಸಾಃ | 6 |
| **ವಯಸ್ಸುಃ** | 42 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 19.03.2024 |
| **ಉದ್ಯೋಗಃ** | ಅಮಾಲಿ ಕೆಲಸ | | |
| **ವಾಸ ಸ್ಥಳಃ** | ಕರಿಯಪ್ಪಲ್ಲಿ ಗ್ರಾಮ, ಚಿಂತಾಮಣಿ ತಾಲ್ಲೂಕು. | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತಿಲ್ಲ. ಫ್ರಾ.ಸಾ.1 ಮತ್ತು ಫ್ರಾ.ಸಾ,2 ರವರು ನನಗೆ ಗೊತ್ತಿಲ್ಲ. ಚಾ.ಸಾ.3 ರವರು ನನಗೆ ಗೊತ್ತಿಲ್ಲ. ಚಾ.ಸಾ.4 ಮತ್ತು ಚಾ.ಸಾ.5 ರವರು ನನಗೆ ಗೊತ್ತು. ಮೃತ ಕವಿತಾ ನನಗೆ ಗೊತ್ತು, ಆಕೆ ನನ್ನ ನಾದಿನಿ. ಆಕೆ 6 ವರ್ಷದ ಹಿಂದೆ ನಿಧನ ಹೊಂದಿದ್ದಳು. ಚಿಂತಾಮಣಿಯ ಗಂಗಮ್ಮನ ದೇವಸ್ಥಾನದಲ್ಲಿ ವಿಷ ಹಾಕಿ ಕೊಟ್ಟಿದ್ದ ಪ್ರಸಾದವನ್ನು ಸ್ವೀಕರಿಸಿ ಆಕೆ ಮೃತಪಟ್ಟಿರುತ್ತಾಳೆ. ಕೋಲಾರದ ಆರ್.ಎಲ್.ಜಾಲಪ್ಪ ಆಸ್ಪತ್ರೆಯ ಶವಗಾರದಲ್ಲಿ ನಾನು

ಮೃತ ಕವಿತಾಳ ಶವವನ್ನು ನೋಡಿರುತ್ತೇನೆ. ಈಗ ತೋರಿಸಿದ ದಾಖಲೆಗಳಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು, ಸದರಿ ದಾಖಲೆಗಳು ನೋಟಿಸ್ ಮತ್ತು ಮೃತ ಕವಿತಾ ಳ ಶವ ತನಿಖಾ ವರದಿ ಆಗಿರುತ್ತದೆ. ಸದರಿ ದಾಖಲೆಗಳನ್ನು ಕ್ರಮವಾಗಿ ನಿ.ಪಿ.4 ಮತ್ತು ನಿ.ಪಿ.5 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ.4(ಎ) ಮತ್ತು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಶವ ತನಿಖೆಯನ್ನು ಮಾಡುವುದಕ್ಕಿಂತ ಮೊದಲು ಪೋಲಿಸರು ನನಗೆ ನಿ.ಪಿ.4 ರಂತೆ ನೋಟಿಸ್ ನ್ನು ನೀಡಿದ್ದರು. ಬೆಳಿಗ್ಗೆ 10.00 ಗಂಟೆಗೆ ನನಗೆ ಪೋಲಿಸರು ನೋಟಿಸ್ ನ್ನು ನೀಡಿದ್ದು, ನಂತರ ಪೋಲಿಸರು ಮಧ್ಯಾಹ್ನ 1.00 ರಿಂದ 4.00 ಗಂಟೆವರೆಗೂ ಶವ ತನಿಖೆಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ಚಾ.ಸಾ.4 ಮತ್ತು ಚಾ.ಸಾ.5 ರವರು ನನ್ನ ಜೊತೆ ಇದ್ದರು. ಸದರಿಯವರು ಸಹ ಶವ ತನಿಖಾ ವರದಿಗೆ ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಸಿ.ಕೆ. ಮತ್ತು ಶ್ರೀ.ಎಸ್.ಆರ್.ಬಿ. ಹಾಗೂ ಶ್ರೀ.ಎನ್.ಎಸ್. ವಕೀಲರು ಏನು ಇರುವುದಿಲ್ಲವೆಂದು ತಿಳಿಸಿದ್ದಾರೆ.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ19.03.2024
ಸ್ಥಳಃ ಚಿಂತಾಮಣಿ

**(ನಾಗವೇಣಿ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.